# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ ಸಂಖ್ಯೆ (08472) 256782
ಇ-ಮೇಲ್: dcahrd1969@gmail.com

ನಿಗಮ ಕಾರ್ಯಾಲಯ, ಸ್ಟೇಷನ್ ರಸ್ತೆ
ಜೆಸ್ಕಾಂ, ಕಲಬುರಗಿ-585102.


ಜೆಸ್ಕಾಂ/ಪ್ರ.ವ್ಯ/ಉಲೆನಿ (ಮಾ.ಸಂ.ಅ)/ಜಿ-11-1687/2023-24 CYS-132 ದಿನಾಂಕ : 21 SEP 2023

## ಅಧಿಕೃತ ಜ್ಞಾಪನ ಪತ್ರ

ವಿಷಯ:- ಎಮ್.ಟಿ.ಟಿ.ಪಿ.-3 (Mandatory Technical Training Programme) ರ ಅಡಿಯಲ್ಲಿ 32 ನೇ ತಂಡದಲ್ಲಿ ನಿರ್ವಹಣಾ ಸಿಬ್ಬಂದಿ ಇವರುಗಳಿಗೆ ದಿನಾಂಕ 09.10.2023 ರಿಂದ 04.12.2023 ವರೆಗೆ ಬಡ್ತಿಪೂರ್ವ ತರಬೇತಿ ನೀಡುವ ಕುರಿತು.

** **** **

ದಿನಾಂಕ ದಿನಾಂಕ 09.10.2023 ರಿಂದ 04.12.2023 ರ ವರೆಗೆ ಎಮ್.ಟಿ.ಟಿ.ಪಿ-3 (Mandatory Technical Training Programme)ರ ಅಡಿಯಲ್ಲಿ ಪ್ರಾರಂಭವಾಗುವ ಬಡ್ತಿಪೂರ್ವ ತರಬೇತಿಗೆ, ಸಹಾಯಕ ಮಾರ್ಗದಾಳು/ಮಾರ್ಗದಾಳು /ಮೆಕ್ಯಾನಿಕ-ದರ್ಜೆ-2/ ಸ್ಟೇಷನ/ ಸ್ಟೋರ್/ಎಂ.ಟಿ./ ಆರ್.ಟಿ/ ಅಟೆಂಡೆಂಟ ದರ್ಜೆ1-2 ಮತ್ತು ಇತರೆ ಗುಂಪಿನಲ್ಲಿ ಸಮಾನಾಂತರ ಹುದ್ದೆಯಲ್ಲಿನ 8 ವರ್ಷ ಸೇವೆ ಸಲ್ಲಿಸಿದ ಮತ್ತು 10 ನೇ ತರಗತಿ ಉತ್ತೀರ್ಣರಾಗಿರುವ ಆಯಾ ವೃತ್ತದಲ್ಲಿನ ಹಿರಿತನ ಪಟ್ಟಿಯಲ್ಲಿನ ಹಿರಿತನಕ್ಕೆ ಅನುಗುಣವಾಗಿ ಪ್ರತಿ ವೃತ್ತದಿಂದ ಕೇವಲ 20 ನೌಕರರನ್ನು ಮಾತ್ರ ನಿಯೋಜಿಸುವದು. ಮತ್ತು ಈ ಸಂಬಂಧ ಕಾರ್ಯ ಮತ್ತು ಪಾಲನೆ ವೃತ್ತದ ರವರುಗಳು ತಮ್ಮ ವ್ಯಾಪ್ತಿಯಲ್ಲಿನ ವಿಭಾಗಗಳಿಂದ ಮಾಹಿತಿ ಪಡೆದು ಸೂಕ್ತ ಅಧಿಕೃತ ಜ್ಞಾಪನಾ ಪತ್ರದೊಂದಿಗೆ ನೌಕರರಿಗೆ ತರಬೇತಿಗೆ ನಿಯೋಜಿಸಿ ಆದೇಶ ಹೊರಡಿಸುವುದು.

ಪ್ರತಿ ವೃತ್ತದಿಂದ ಕೇವಲ 20 ಜನ ನೌಕರರನ್ನು ಮತ್ತು ತರಬೇತಿಗೆ ನಿಯೋಜಿಸುವುದು ಹಾಗೂ ಇದಕ್ಕೆ ಮೀರಿದ ನೌಕರರನ್ನು ಯಾವುದೇ ಕಾರಣಕ್ಕೂ ತರಬೇತಿಗೆ ಪರಿಗಣಿಸಲಾಗುವುದಿಲ್ಲ.

ಈ ಹಿಂದೆ ಎಮ್.ಟಿ.ಟಿ.ಪಿ.-3 ರ ಅಡಿಯಲ್ಲಿ ತರಬೇತಿ ಹೊಂದಿ ಉತ್ತೀರ್ಣ/ಅನುತ್ತೀರ್ಣರಾದ ಅಭ್ಯರ್ಥಿಗಳನ್ನು ಮತ್ತೆ ನಿಯೋಜಿಸಬಾರದು.

ಸಂಬಂಧ ಪಟ್ಟ ನಿಯಂತ್ರಣಾಧಿಕಾರಿಗಳು ಮುಂಗಡವಾಗಿಯೇ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ನಿಯೋಜಿತ ನೌಕರರನ್ನು ಬಿಡುಗಡೆ ಮಾಡಿ ದಿನಾಂಕ 09.10.2023 ರಂದು ಮುಂಜಾನೆ ಸರಿಯಾಗಿ 9.00 ಗಂಟೆ ಗು.ವಿ.ಸ.ಕಂ.ನಿ., ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ನಿಗಮ ಕಛೇರಿ, ಕಲಬುರಗಿಯಲ್ಲಿ ಹಾಜರಾಗವಂತೆ ಸೂಚಿಸುವದು.

ನಿಯೋಜಿತ ನೌಕರರು ನಿಗಮ/ಕಂಪನಿಗಳ ಸೇವಾ ನಿರ್ಬಂಧನೆ ಅನುಸಾರ ಪ್ರಯಾಣ ಭತ್ಯೆ, ದಿನಭತ್ಯೆಗೆ ಅರ್ಹರಾಗಿರುತ್ತಾರೆ. ಮಧ್ಯಾಹ್ನದ ಊಟದ ಹೊರತಾಗಿ ಇತರೇ ವ್ಯವಸ್ಥೆಯನ್ನು ಸ್ವತ: ನೌಕರರು ಮಾಡಿಕೊಳ್ಳತಕ್ಕುದ್ದು ತರಬೇತಿಗೆ ತಗಲುವ ಪ್ರಯಾಣದ ಭತ್ಯೆ, ದಿನಭತ್ಯೆ ಇತ್ಯಾದಿ ಖರ್ಚುಗಳ ಬಾಬ್ತನ್ನು ಲೆಕ್ಕ ಶೀರ್ಷಿಕೆ 75.761, 75.762 ಗೆ ಲೆಕ್ಕಿಕರಿಸುವದು.

ತರಬೇತಿಗೆ ನಿಯೋಜಿಸಲ್ಪಟ್ಟ ನೌಕರರು ದಿನಾಂಕ 09.10.2023 ರಂದು ಬೆಳಗ್ಗೆ 09.00 ಗಂಟೆಗೆ ಗು.ವಿ.ಸ.ಕಂ.ನಿ., ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ನಿಗಮ ಕಛೇರಿ, ಕಲಬುರಗಿಯಲ್ಲಿ ಹಾಜರಾಗಿ ತರಬೇತಿಗೆ ನೊಂದಾಯಿಸಿಕೊಳ್ಳಲು ಅನುಕೂಲವಾಗುವಂತೆ ಅವರನ್ನು ಸಕಾಲದಲ್ಲಿ ಕೆಲಸದಿಂದ ಕಾರ್ಯ ವಿಮುಕ್ತ (ರಿಲೀವ್) ಗೊಳಸುವುದು. ಜಮೆಯಲ್ಲಿರುವ ಸಾಂಧರ್ಭಿಕ ರಜೆಯ ವಿವರಗಳನ್ನು ಸಹ ನಮೂದಿಸುವುದು.

ತರಬೇತಿಗೆ ನಿಯೋಜಿಸಲ್ಪಟ್ಟ ನೌಕರರು 3 ಪಾಸ್‌ಪೋರ್ಟ ಅಳತೆಯ ಭಾವಚಿತ್ರಗಳಲ್ಲಿ ಒಂದನ್ನು ಕಾರ್ಯವಿಮುಕ್ತ ಪತ್ರದ ಬಲಭಾಗದಲ್ಲಿ ಅಂಟಿಸಿ ಕಛೇರಿ ಮುಖ್ಯಸ್ಥರು ಸಹಿ ಮತ್ತು ಮೊಹರುಗಳೊಂದಿಗೆ ಈ ಕೇಂದ್ರದಲ್ಲಿ ನೊಂದಾಯಿಸಿಕೊಳ್ಳುವಾಗ ಹಾಜರು ಪಡಿಸಬೇಕು. ಇನ್ನೇರಡು ಭಾವಚಿತ್ರಗಳನ್ನು ನೊಂದಣಿ ಸಮಯದಲ್ಲಿ ಹಾಜರುಪಡಿಸುವುದು.

ನಿಯೋಜಿತ ನೌಕರರಿಗೆ ತರಬೇತಿ ಅವಧಿಯಲ್ಲಿ ಪೂರ್ವ ನಿಗದಿತ ಕಾರ್ಯಕ್ರಮ ಅಥವಾ ವೈಯಕ್ತಿಕ ಕಾರಣಗಳಗಾಗಿ ರಜೆಯನ್ನು ನೀಡಲಾಗುವುದಿಲ್ಲ ಎಂಬ ಅಂಶವನ್ನು ಸಂಬಂಧಿಸಿದ ನೌಕರರ ಗಮನಕ್ಕೆ ತರಲು ತಿಳಸಲಾಗಿದೆ.

**ತರಬೇತಿಗೆ ಆಗಮಿಸುವ ಶಿಕ್ಷಣಾರ್ಥಿಗಳಗೆ ಸೂಚನೆಗಳು**

1) ತರಬೇತಿಯು ಕಡ್ಡಾಯವಾಗಿರುತ್ತದೆ ಮತ್ತು ತರಬೇತಿ ಸಮಯದಲ್ಲಿ ಯಾವುದೇ ರಜೆಗಳಗೆ ಅನುಮತಿ ಇರುವುದಿಲ್ಲ.
2) ತರಬೇತಿಯ ಅವಧಿಯಲ್ಲಿ ಗೈರು ಹಾಜರಾಗುವ ಅಭ್ಯರ್ಥಿಗಳ ವಿರುದ್ಧ ನೌಕರರ ಶಿಸ್ತು ನಿಬಂಧನೆಯ ಅನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.
3) ಔಷದೋಪಚಾರ (Under medication) ದಲ್ಲಿರುವ ಶಿಕ್ಷಣಾರ್ಥಿಗಳು ಅವಶ್ಯಕ ಔಷಧಿಗಳನ್ನು ತಪ್ಪದೆ ತರುವುದು.
4) ತರಬೇತಿಗೆ ಹಾಜರಾಗುವವರು ತಮ್ಮ ಕೆಲಸದ ಕಾರ್ಯ ವಿಮುಕ್ತ ಪತ್ರ ಹಾಗೂ ಗುರುತಿನ ಪತ್ರವನ್ನು ತಪ್ಪದೇ ತರುವುದು.
5) ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಆವರಣದಲ್ಲಿ/ವರ್ಗಗಳಲ್ಲಿ ತಂಬಾಕು, ಸಿಗರೇಟ್, ಗುಟ್ಕಾ ಹಾಗೂ ಮದ್ಯಪಾನ ಸೇವನೆಯು ನಿಷೇಧವಾಗಿರುತ್ತದೆ. ಒಂದು ವೇಳೆ ತರಬೇತಿಗೆ ನಿಯೋಜಿಸಲ್ಪಟ್ಟ ಶಿಕ್ಷಣಾರ್ಥಿಗಳು ಅಂತಹ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಕಂಡು ಬಂದಲ್ಲಿ, ನಿಗಮದ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು. ಹಾಗೂ ತರಬೇತಿಯಿಂದ ವಾಪಸ ಕಳಸಲಾಗುವುದು.
6) ಅಭ್ಯರ್ಥಿಗಳು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಕಡ್ಡಾಯವಾಗಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳತಕ್ಕದ್ದು.
7) ನಿಯೋಜಿತ ನೌಕರರು ಕಾನೂನು ಪ್ರಕಾರ ಪ್ರಯಾಣ ಭತ್ಯೆ, ದಿನ ಭತ್ಯೆಗೆ ಅರ್ಹರು, ಹಾಗೂ ಮದ್ಯಾನದ ಊಟದ ಹೊರತಾಗಿ ಇತರೇ ಮತ್ತು ವಸತಿ ವ್ಯವಸ್ಥೆಯನ್ನು ಸ್ವತ: ನೌಕರರು ಮಾಡಿಕೊಳ್ಳತಕ್ಕದ್ದು.
8) ತರಗತಿಗಳಲ್ಲಿ ಮೊಬೈಲ್ ಫೋನ್ ಬಳಕೆಗೆ ಅವಕಾಶವಿರುವುದಿಲ್ಲ.
9) ತರಬೇತಿಗೆ ಹಾಜರಾಗುವ ಸಮಯದಲ್ಲಿ ತಮ್ಮ ಇತ್ತೀಚಿನ 3 ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರವನ್ನು ತರುವುದು.

**ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ.**

ಪ್ರಧಾನ ವ್ಯವಸ್ಥಾಪಕರು
(ಆ.ಮತ್ತು ಮಾ.ಸಂ.ಅ)
ಗು.ವಿ.ಸ.ಕಂ.ನಿ., ಕಲಬುರಗಿ

ಪ್ರತಿಗಳು :-

1. ಮುಖ್ಯ ಅಭಿಯಂತರರು (ವಿ), (ಕಾರ್ಯಾಚರಣೆ) ನಿಗಮ ಕಛೇರಿ ಗು.ವಿ.ಸ.ಕಂ.ನಿ., ಕಲಬುರಗಿ.
2. ಮುಖ್ಯ ಅಭಿಯಂತರರು (ವಿ), ಕಾ ಮತ್ತು ಪಾ ವಲಯ ಗು.ವಿ.ಸ.ಕಂ.ನಿ.,/ಕ.ವಿ.ಪ್ರ.ನಿನಿ., ಕಲಬುರಗಿ.
3. ಎಲ್ಲಾ ಅಧೀಕ್ಷಕ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನೆ ವೃತ್ತ ಗು.ವಿ.ಸ.ಕಂ.ನಿ.
4. ಅಧೀಕ್ಷಕ ಅಭಿಯಂತರರು (ವಿ), ಕ.ವಿ.ಪ್ರ.ನಿನಿ., ಕಲಬುರಗಿ
5. ಎಲ್ಲಾ ಉಪಲೆಕ್ಕನಿಯಂತ್ರಣಾಧಿಕಾರಿಗಳು, ಕಾ ಮತ್ತು ಪಾ ವೃತ್ತ ಗು.ವಿ.ಸ.ಕಂ.ನಿ.,
6. ಎಲ್ಲಾ ಕಾರ್ಯನಿರ್ವಾಹಕ ಅಭಿಯಂತರರು (ವಿ), ಕಾ ಮತ್ತು ಪಾ/ಸಿ.ಎಸ್.ಸಿ/ಗ್ರಾಮೀಣ ವಿಭಾಗಗಳು ಗು.ವಿ.ಸ.ಕಂ.ನಿ., ಇವರ ಸೂಕ್ತ ಕ್ರಮಕ್ಕಾಗಿ.
7. ಕಾರ್ಯನಿರ್ವಾಹಕ ಅಭಿಯಂತರರು (ವಿ), (ಐ.ಟಿ ಶಾಖೆ) ನಿಗಮ ಕಛೇರಿ, ಗು.ವಿ.ಸ.ಕಂ.ನಿ., ಕಲಬುರಗಿ ರವರಿಗೆ ಅಂತರ ಜಾಲದಲ್ಲಿ ಪ್ರಕಟಣೆಗಾಗಿ.
8. ಕಾರ್ಯನಿರ್ವಾಹಕ ಇಂಜಿನಿಯರ (ವಿ), ಕವಿಪ್ರನಿನಿ., ಕಲಬುರಗಿ/ಯಾದಗಿರ/ಮುನಿರಾಬಾದ /ಲಿಂಗಸೂಗುರು/ ಬಳ್ಳಾರಿ ಇವರ ಮಾಹಿತಿಗಾಗಿ.
9. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾಂತ್ರಿಕ)/ ಆರ್ಥಿಕ ಸಲಹೆಗಾರರು ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು ಮಾಹಿತಿಗೆ.

ಮು.ಕ